ಹಾರಾಡು ಹದ್ದು, ಹಾರಾಡು!

ಆಫ್ರಿಕೆಯ ಒಂದು ಕತೆ

ಪುನರ್ಲೇಖನಃ
ಕ್ರಿಸ್ಟೋಫರ ಗ್ರೆಗೋವಸ್ಕಿ

ಚಿತ್ರಗಳು
ನಿಕಿ ಡಾಲಿ

ಆರ್ಚಬಿಶಪ್ ಡೆಸ್ಮಂಡ ಟುಟು ಅವರ ಮುನ್ನುಡಿ

‘ಆಫ್ರಿಕಾದ ಅಗ್ರೆ’ ಎಂದು ಚಿರಪರಿಚಿತರಾದ ಘಾನಾದ ಜೇಮ್ಸ ಅಗ್ರೆ ಇವರು ರಚಿಸಿದ ‘ಹಾರಾಡು ಹದ್ದು, ಹಾರಾಡು’ಇದು ಒಂದು ಆಫ್ರಿಕಾದ ಜಾನಪದ ಕತೆ. ನಾವೆಲ್ಲರು ಯಾವಾಗಲೂ ಕೋಳಿಮರಿಗಳಂತೆ ಕೆಲವೇ ದಿನ ಜೀವಂತವಿದ್ದು ನಶಿಸಿಹೋಗುವದೇ ನಮ್ಮ ಹಣೆಬರಹವೆಂದು ತಿಳಿದುಕೊಂಡೇ ಜೀವಿಸುತ್ತೇವೆ. ಆದರೆ ನಮ್ಮ ಕ್ಷಿತಿಜ ಇದಕ್ಕಿಂತ ಹೆಚ್ಚು ವಿಸ್ತರಿಸಿದ್ದಿದೆ, ಉದಾತ್ತವಾದ ಕಾರ್ಯಕ್ಕೆ ಅಣಿ ಮಾಡಿಕೊಳ್ಳುವಂತಹದಿದೆ. ಉಜ್ವಲವಾದ, ಅಲೌಕಿಕವೆನ್ನಿಸುವ ಕಾರ್ಯ ನಮ್ಮಿಂದ ಆಗಬೇಕಾಗಿದೆ. ನಾವು ನೆಲದ ಮೇಲೆಯೇ ಅಂಟಿಕೊಂಡಿರುವ ಕೋಳಿಮರಿಗಳಲ್ಲ, ನಾವು ಆಕಾಶದುದ್ದಕ್ಕೂ ಹಾರಾಡುವ ಹದ್ದುಗಳು. ನಮ್ಮಲ್ಲಿ ಕಾಣದಿದ್ದರೂ ನಾವು ಸ್ವತಂತ್ರವಾಗಿರುವ, ನಗೆದಾಡುವ, ಒಳ್ಳೆಯದನ್ನು ಬಯಸುವ, ಪ್ರೀತಿ, ಶಾಶ್ವತತೆಗಾಗಿ ಹಂಬಲಿಸುವ ಮನುಷ್ಯರು. ನಮ್ಮ ದೃಷ್ಟಿ ಉದಯಿಸುತ್ತಿರುವ ಸೂರ್ಯನ ಕಡೆ ಇರಲಿ. ಆಲಸ್ಯವನ್ನು ತೊರೆದು ಇವುಗಳಿಗಾಗಿ ನಾವು ಪ್ರಯತ್ನಿಸುವ.
ಕ್ರಿಸ್ಟೋಫರ ಗ್ರೆಗೋವಸ್ಕಿ ರಚನಾತ್ಮಕ ಕಾರ್ಯ ಮಾಡುವ ಜಾಣ ಮನುಷ್ಯ. ಆತನು ನಮ್ಮ ಮನಸೆಳೆಯುವ ಕತೆ ಬರೆದಿದ್ದಾನೆ. ತನ್ನ ಚಿಕ್ಕಮಗು ಮೃತ್ಯುಶಯ್ಯೆಯಲ್ಲಿದ್ದಾಗ ಹೇಳಿದ ಕತೆ ಇದು. ಆತನ ಈ ಕತೆ ನಮಗೆಲ್ಲರಿಗೂ ಪ್ರೇರಣೆ ಕೊಡುವಂತಹದು.

- ಆರ್ಚಬಿಶಪ್ ಡೆಸ್ಮಂಡ ಟುಟು



ಹಾರಾಡು ಹದ್ದು, ಹಾರಾಡು!

ಆಫ್ರಿಕೆಯ ಒಂದು ಕತೆ

ಪುನರ್ಲೇಖನಃ ಕ್ರಿಸ್ಟೋಫರ ಗ್ರೆಗೋವಸ್ಕಿ
ಚಿತ್ರಗಳುಃ ನಿಕಿ ಡಾಲಿ

ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಒಬ್ಬ ಒಕ್ಕಲಿಗನ ಆಕಳ ಕರು ಕಳೆದು ಹೋದದ್ದರಿಂದ ಹುಡುಕಲು
ಹೊರಬಿದ್ದನು. ಸಂಜೆಯವರೆಗೆ ದನ ಕಾಯುವ ಹುಡುಗರು ಮತ್ತು
ಒಕ್ಕಲಿಗ ಎಷ್ಟು ಹುಡುಕಿದರೂ ಕರು ದೊರೆಯಲಿಲ್ಲ.
ಅದೇ ರಾತ್ರಿ ಭಯಂಕರವಾದ ಬಿರುಗಾಳಿ ಬೀಸುತ್ತಿತ್ತು.



ಆತನು ಕೊಳ್ಳದಲ್ಲಿ ಹುಡುಕಿದನು. ನದಿ ದಂಟೆಗುಂಟ ಹುಡುಕಿದನು; ಗಿಡಗಂಟಿ, ಬಂಡೆಗಲ್ಲು ಮತ್ತು ನೀರು ಚಿಮ್ಮುವ ಹಳ್ಳಗಳಲ್ಲಿ ಕೂಡ ಹುಡುಕಿದನು.

ಗುಡ್ಡ-ದಿನ್ನೆಗಳನ್ನು ಸುತ್ತಾಡಿದನು; ಕತ್ತಲೆಯಲ್ಲಿ ಅಡವಿಯ ದಟ್ಟವಾದ ಗಿಡ-ಮರಗಳಲ್ಲಿ ಶೋಧಿಸಿದನು; ಅಲ್ಲಿಂದ ಹೊರಬಿದ್ದು ಕೆಸರು ತುಂಬಿದ ದನಕರುಗಳು ಯಾವಾಗಲು ಹೋಗುವ ದಾರಿಯಗುಂಟ ಹುಡುಕಿದನು.



ಅವನೆತ್ತರ ಬೆಳೆದ ಹುಲ್ಲಿನಲ್ಲಿ ಶೋಧಿಸಿದನು. ಮುಗಿಲೆತ್ತರದ ಪರ್ವತದ ಏರನ್ನು ಹತ್ತಿ ಮಹಾಕಾಯ ಬಂಡೆಗಲ್ಲಿನ ಸಂದಿಗಳಲ್ಲಿ ಹುಡುಕಿದನು. ಈ ರೀತಿಯಲ್ಲಿ ಹುಡುಕುವಾಗ ಕರುವನ್ನು ದೊಡ್ಡ ದನಿಯಲ್ಲಿ ಕರೆಯುತ್ತಿದ್ದನು. ಇವನ ದನಿ ಕೇಳಿಸಿ ಕರು ಬರಬಹುದೆಂದು ಆತನ ಎಣಿಕೆ. ಎಷ್ಟು ಜೋರಾಗಿ ಕೂಗಿದರೂ ನದಿಯ ಕೊಳ್ಳ ಮತ್ತು ಬಂಡೆಗಲ್ಲಿಗೆ ಆತನ ದನಿ ಹೋಗಿ ಅವನಿಗೆ ತನ್ನ ಮರುಧ್ವನಿಯೇ ಕೇಳಿಸುತ್ತಿತ್ತು. ಆದರೆ ಕರು ಬರಲೇ ಇಲ್ಲ.

ಬಿರುಗಾಳಿಯಿಂದ ರಕ್ಷಿಸಿಕೊಳ್ಳಲು ಕರು ಬಂಡೆಗಳ ಸಂದಿನಲ್ಲಿ ಅಡಗಿಕೊಂಡಿರಬೇಕೆಂದು ಆತ ಬಂಡೆಗಲ್ಲಿಗಳ ಇರಿಕಿನಲ್ಲಿ ಹಣಿಕೆ ಹಾಕಿ ಒಮ್ಮೆಲೆ ದಂಗು ಬಡಿದವರಂತೆ ನಿಂತನು. ಆತನಿಗೆ ಒಂದು ಆಶ್ಚರ್ಯಕರವಾದ ನೋಟ ನೋಡಲು ದೊರಕಿತು. ಕಲ್ಲಿನ ತುದಿಯಲ್ಲಿ ಒಂದು ಪುಟ್ಟ ಹದ್ದಿನ ಮರಿ ಕಂಡಿತು. ಬಿರುಗಾಳಿಯಲ್ಲಿ ಅದರ ಗೂಡು ಹಾರಿ ಹೋಗಿದ್ದರಿಂದ ಕೆಲವೇ ಗಂಟೆ ಮೊದಲು ತತ್ತಿಯಿಂದ ಹೊರಬಿದ್ದ ಮರಿ ನಡುಗುತ್ತ ಕುಳಿತಿತ್ತು.

ಆತ ಕೈಚಾಚಿ ಆ ಮರಿಯನ್ನು ನಿದಾನವಾಗಿ ಅಂಗೈಯಲ್ಲಿ ಹಿಡಿದನು. ಮನೆಗೆ ಹೋಗಿ ಇದರ ಆರೈಕೆ ಮಾಡಬೇಕೆಂದು ಅದನ್ನು ತೆಗೆದುಕೊಂಡು ಅಲ್ಲಿಂದ ಹೊರಟನು.

ದಾರಿಯಲ್ಲಿ ಕರುವನ್ನು ಕೂಡ ಶೋಧಿಸುತ್ತಿದ್ದನು.

ಆತ ಮನೆ ಹತ್ತಿರ ಬಂದಾಗ ಅವನ ಮಕ್ಕಳೆಲ್ಲ ಅವನನ್ನು ಮುತ್ತಿದರು. ‘ಅಪ್ಪಾ, ಕರು ತನ್ನಷ್ಟಕ್ಕೆ ತಾನೇ ಮನೆಗೆ ಬಂತು!’ ಎಂದು ಒಂದೇ ದನಿಯಲ್ಲಿ ಹೇಳತೊಡಗಿದರು. ಒಕ್ಕಲಿಗನಿಗೆ ಬಹು ಸಂತೋಷವಾಯಿತು.

ಅವನು ತನ್ನ ಹೆಂಡತಿ ಮತ್ತು ಮಕ್ಕಳಿಗೆ ತಾನು ತಂದ ಹದ್ದಿನ ಮರಿಯನ್ನು ತೋರಿಸಿದನು. ಆಮೇಲೆ ಆ ಮರಿಯನ್ನು ಹುಂಜದ ರಕ್ಷಣೆಯಲ್ಲಿರುವ ಕೋಳಿ ಮತ್ತು ಅವುಗಳ ಮರಿಗಳಿರುವ ಬೆಚ್ಚಗಿನ ಗೂಡಿನಲ್ಲಿ ಮೆಲ್ಲನೆ ಇಟ್ಟನು.

"ಹದ್ದು ಪಕ್ಷಿಗಳೆಲ್ಲರಲ್ಲಿಯ ಅರಸ. ಆದರೆ ನಾವು ಅದಕ್ಕೆ ಕೋಳಿ ಮರಿಗಳ ಹಾಗೆ ಇರುವಂತೆ ಕಲಿಸುವ." ಆತ ಹೇಳಿದನು.

ಹೀಗೆ ಹದ್ದಿನ ಮರಿ ಕೋಳಿಮರಿಗಳ ನಡುವೆ ಬೆಳೆಯತೊಡಗಿತು. ಕೋಳಿ ಮರಿಗಳ ನಡತೆ ಕಲಿಯತೊಡಗಿತು. ಕೋಳಿಮರಿಗಳ ಹಾಗೆ ಅಂಗಳದಲ್ಲಿ ಬಿದ್ದಿರುವ ಕಾಳು-ಕಡಿಗಳನ್ನು ತಿನ್ನತೊಡಗಿತು. ಆತನ ಮಕ್ಕಳ ಗೆಳೆಯರೆಲ್ಲ ಈ ಸೋಜಿಗದ ‘ಕೋಳಿಮರಿ’ಯನ್ನು ಕಂಡು ಅಚ್ಚರಿ ಪಡೆಯುತ್ತಿದ್ದರು. ಅದು ದೊಡ್ಡದಾದಂತೆ ಉಳಿದ ಮರಿಗಳಿಗಿಂತ ಬೇರೆಯೇ ಕಾಣತೊಡಗಿತು.





ಒಂದು ದಿನ ಅವನ ಗೆಳೆಯನು ಅವನಿಗೆ ಭೆಟ್ಟಿಯಾಗಲು ಅವನ ಮನೆಗೆ ಬಂದನು. ಒಕ್ಕಲಿಗ ಮತ್ತು ಅವನ ಗೆಳೆಯ ಗುಡಿಸಲ ಬಾಗಿಲಿನಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದರು.

ಗೆಳೆಯ ಕೋಳಿ ಗೂಡಿನಲ್ಲಿಯ ಮರಿಗಳನ್ನು ನೋಡುತ್ತಿದ್ದಾಗ ಒಮ್ಮೆಲೆ "ಅದು ಕೋಳಿ ಮರಿಯಲ್ಲ, ಹದ್ದು!" ಎಂದು ಅಚ್ಚರಿಪಟ್ಟು ಜೋರಾಗಿ ಹೇಳಿದನು.

ಒಕ್ಕಲಿಗ ಮುಗುಳು ನಗುತ್ತ "ಅದು ಕೋಳಿಮರಿಯೇ. ಮರಿಗಳ ಹಾಗೆ ನಡೆಯುತ್ತದೆ, ಕಾಳುಗಳನ್ನು ತಿನ್ನುತ್ತದೆ. ಮರಿಯ ಹಾಗೆ ವಿಚಾರ ಮಾಡುತ್ತದೆ. ಅದು ಕೋಳಿಮರಿಯೇ." ಎಂದು ಹೇಳಿದನು.

ಆದರೆ ಗೆಳೆಯ ಒಪ್ಪಲಿಲ್ಲ. "ನಾನು ಅದು ಹದ್ದೇ ಎಂಬುದನ್ನು ತೋರಿಸುತ್ತೇನೆ. " ಎಂದು ಹೇಳಿದ.

“ಸರಿ, ತೋರಿಸು.” ಒಕ್ಕಲಿಗ ಹೇಳಿದ.



ಒಕ್ಕಲಿಗನ ಮಕ್ಕಳು ಹದ್ದಿನ ಮರಿ ಹಿಡಿಯಲು ಗೆಳೆಯನಿಗೆ ಸಹಾಯ ಮಾಡಿದವು.
ಅದು ಸಾಕಷ್ಟು ತೂಕದ್ದಿತ್ತು. ಆದರೂ ಗೆಳೆಯ ಅದನ್ನು ತಲೆ ಮೇಲೆ ತೆಗೆದುಕೊಂಡು "ನೀನು ಕೋಳಿ ಮರಿಯಲ್ಲ. ಹದ್ದಿನ ಮರಿ. ನೀನು ನೆಲದ ಮೇಲೆ ಓಡಾಡುವ ಹಕ್ಕಿಯಲ್ಲ. ಮುಗಿಲಲ್ಲಿ ಹಾರಾಡುವ ಹಕ್ಕಿ. ಹಾರಾಡು, ಹದ್ದು ಹಾರಾಡು. " ಎಂದು ಹೇಳತೊಡಗಿದನು.
ಹಕ್ಕಿ ತನ್ನ ರೆಕ್ಕೆಗಳನ್ನು ಅಗಲು ಮಾಡಲು ಪ್ರಯತ್ನಿಸತೊಡಗಿತು. ಹೀಗೆ ಮಾಡುವದನ್ನು ಒಕ್ಕಲಿಗ ಹಾಗು ಅವನ ಮಕ್ಕಳು ಎಷ್ಟೋ ಸಲ ನೋಡಿದ್ದರು. ಆ ಮೇಲೆ ಹಕ್ಕಿ ಕೋಳಿಮರಿಗಳನ್ನು ದಿಟ್ಟಿಸಿ ನೋಡಿ ಅವುಗಳ ಹಾಗೆ ನೆಗೆಯುತ್ತ ಕಾಳುಗಳನ್ನು ಆರಿಸತೊಡಗಿತು.
"ನೋಡು ಇದು ಕೋಳಿಮರಿಯೇ. " ಒಕ್ಕಲಿಗ ನಗುತ್ತ ಹೇಳಿದನು.



ಮರುದಿನ ಮತ್ತೇ ಗೆಳೆಯ ಮನೆಗೆ ಬಂದನು. "ನಾನು ಇದು ಕೋಳಿಮರಿಯಲ್ಲ, ಇದು ಹದ್ದು. ಒಂದು ನಿಚ್ಚಣಿಕೆ ತೆಗೆದುಕೊಂಡು ಬಾ" ಎಂದು ಒಕ್ಕಲಿಗನಿಗೆ ಹೇಳಿದನು. ಬಗಲಲ್ಲಿ ಆ ದೊಡ್ಡ ಹಕ್ಕಿಯನ್ನು ಹಿಡಿದುಕೊಂಡು ಎತ್ತರದಲ್ಲಿರುವ ಇಳಿಜಾರು ಮಾಳಿಗೆಯ ಮೇಲೆ ಹತ್ತುವದು ಕಷ್ಟವಾದರೂ ಆತ ನಿಚ್ಚಣಿಕೆ ಹಿಡಿದು ಹೇಗೋ ಮೇಲೆರಿದನು.
ಒಕ್ಕಲಿಗ ಇನ್ನಷ್ಟು ಜೋರಾಗೀ ನಕ್ಕ. "ಅದು ಕೋಳಿಯಂತೆ ತಿನ್ನುತ್ತದೆ, ಕೋಳಿಯ ಹಾಗೆ ವಿಚಾರ ಮಾಡುತ್ತದೆ, ಅದು ಕೋಳಿಯೇ" ಎಂದು ಹೇಳಿದ.
ಗೆಳೆಯ ಮಾತ್ರ "ನೀನು ಕೋಳಿಯಲ್ಲ. ನೀನು ಹದ್ದು. ನೆಲದ ಮೇಲೆ ನಿನ್ನ ಕೆಲಸವಿಲ್ಲ. ನೀನು ಮುಗಿಲಲ್ಲಿ ಹಾರಬೇಕು. ಹಾರು ಹದ್ದು, ಹಾರು. " ಎಂದು ಹೇಳುತ್ತಿದ್ದನು.

ಮತ್ತೊಮ್ಮೆ ಆ ದೊಡ್ಡ ಹಕ್ಕಿ ತನ್ನ ರೆಕ್ಕೆಗಳನ್ನು ಎತ್ತಲು ಹವಣಿಸುತ್ತಿತ್ತು. ಹಾಗೆ ಮಾಡುವಾಗ ಅದರ ಜೋಲಿ ಹೋಗುತ್ತಿತ್ತು. ಆದರ ಕಾಲಿನ ಉಗುರುಗಳು ಕಂಡವು.
"ಹಾರಾಡು ಹದ್ದು, ಹಾರಾಡು!" ಮತ್ತೊಮ್ಮೆ ಆತ ಹೇಳಿದನು.
ಆದರೆ ಹಕ್ಕಿ ಅವನ ಕೈಯಿಂದ ಜಾರಿ ಮಾಳಿಗೆಯ ಮೇಲಿಂದ ಕೆಳಬಿದ್ದು ಕೋಳಿಮರಿಗಳ ಜತೆ ಹೋಗಿ ನಿಂತಿತು.
ಉಳಿದವರೆಲ್ಲ ನಗತೊಡಗಿದರು.



ಮರುದಿನದ ನಸುಮುಸುಕಿನಲ್ಲಿ ಒಕ್ಕಲಿಗನ ನಾಯಿಗಳು ಬೊಗಳತೊಡಗಿದವು. ಅಂತಹ ಕತ್ತಲೆಯಲ್ಲಿ ಯಾರೋ ಕರೆಯುತ್ತಿರುವ ದನಿ ಕೇಳಿಸಿತು. ಒಕ್ಕಲಿಗ ಓಡುತ್ತ ಹೋಗಿ ಬಾಗಿಲು ತೆರೆದನು.
ಆತನ ಗೆಳೆಯನೇ ಮತ್ತೇ ಬಂದಿದ್ದನು. “ಆ ಹಕ್ಕಿಯ ಬಗ್ಗೆ ನನಗೆ ಇನ್ನೊಂದು ಸಂಧಿಯನ್ನು ಕೊಡು.” ಎಂದು ಆತನು ಅಂಗಲಾಚಿ ಬೇಡಿಕೊಂಡನು.
“ಏನಿದು, ಎಷ್ಟು ಗಂಟೆ ಎಂಬುದರ ಕಲ್ಪನೆ ನಿನಗಿದೇಯೆ? ನಿನಗೇನು ಮರುಳು.” ಎಂದು ತೆಗಳತೊಡಗಿದನು.
“ನನ್ನ ಜೊತೆ ಬಾ. ಹಕ್ಕಿಯನ್ನು ತೆಗೆದುಕೊಂಡು ಬಾ.” ಎಂದು ಗೆಳೆಯ ಹೇಳಿದನು.
ಮನಸ್ಸಿಲ್ಲದ ಮನಸ್ಸಿನಿಂದ ಆತ ಗೂಡಿನಲ್ಲಿ ಕೈ ಹಾಕಿದ. ಹದ್ದಿನ ಮರಿ ಇತರ ಕೋಳಿಮರಿಗಳಂತೆ ತೆಪ್ಪಗೆ ಗಾಢವಾಗಿ ಮಲಗಿತ್ತು. ಹಕ್ಕಿಯನ್ನು ತೆಗೆದುಕೊಂಡು ಇಬ್ಬರು ಕತ್ತಲೆಯಲ್ಲಿ ಮಾಯವಾದರು.



"ಎಲ್ಲಿ ಹೋಗುತ್ತಿದ್ದೇವೆ?" ನಿದ್ದೆಯ ಮಬ್ಬಿನಲ್ಲಿ ಒಕ್ಕಲಿಗ ಕೇಳಿದ.
“ನೀನು ಎಲ್ಲಿ ಈ ಹದ್ದಿನ ಮರಿಯನ್ನು ಕಂಡೆಯೋ ಆ ಪರ್ವತದ ಮೇಲೆ.”
“ಆದರೆ ಇಂತಹ ಕತ್ತಲಲ್ಲಿ ಏಕೆ?”
“ಈ ಹದ್ದಿನ ಮರಿಗೆ ಪರ್ವತದ ಮೇಲಿನಿಂದ ಸೂರ್ಯೋದಯವನ್ನು ತೋರಿಸಿ ಆ ಸೂರ್ಯನ ಜೊತೆ ಆಕಾಶದಲ್ಲಿ ಹಾರಲಿಕ್ಕೆ ಬಿಡಬೇಕಾಗಿದೆ. ಈ ಆಕಾಶವೇ ಅದರ ಸೊತ್ತು.”

ಅವರಿಬ್ಬರು ಮೊದಲು ಕೊಳ್ಳದಲ್ಲಿ ಕೆಳಗಿಳಿದರು. ಆ ಮೇಲೆ ನದಿಯನ್ನು ದಾಟಿದರು. . ಗೆಳೆಯನೇ ಮುಂದೆ ಮುಂದೆ ಹೋಗುತ್ತಿದ್ದನು. ಹಕ್ಕಿ ಸಾಕಷ್ಟು ಭಾರವಾಗಿತ್ತು ಮತ್ತು ಅದರ ಗಾತ್ರ ಕೂಡ ಸಾಕಷ್ಟಿತ್ತು. ಹಕ್ಕಿಯನ್ನು ಎತ್ತಿಕೊಂಡು ನಡೆಯುದು ಸುಲಭವಾಗಿರಲಿಲ್ಲ. ಆದರೂ ಗೆಳೆಯ ಹಕ್ಕಿಯನ್ನು ಒಕ್ಕಲಿಗನ ಕೈಯಲ್ಲಿ ಕೊಡಲು ಒಪ್ಪಲಿಲ್ಲ.
“ಬೇಗ, ಬೇಗ ನಡೆ. ಸೂರ್ಯ ಹುಟ್ಟುವ ಮೊದಲು ನಾವು ತಲುಪಲೇಬೇಕು.” ಅವನು ಅವಸರ ಮಾಡುತ್ತಲಿದ್ದ.

ಇವರು ಪರ್ವತ ಹತ್ತುವಾಗಲೇ ಮೂಡಲು ಮೂಡತೊಡಗಿತು. ಆಗಸವೆಲ್ಲ ಕೆಂಪಾಗತೊಡಗಿತು. ಹಾವಿನ ಹಾಗೆ ಕಾಣುವ ನದಿ, ಪರ್ವತ ಮತ್ತು ಗಿಡ-ಗಂಟಿಗಳ ಮೇಲೆ ಸೂರ್ಯನ ಬಂಗಾರದ ಕಿರಣಗಳು ಹಾಸಿಗೆ ಹೊದಿಸಿದಂತೆ ಕಾಣುತ್ತಿತ್ತು. ದೂರದ ಸಮುದ್ರದವರೆಗೆ ಅದು ತಲುಪಿದಂತೆ ಕಂಡಿತು. ಮುಗಿಲಿನಲ್ಲಿಯ ಮೋಡಗಳು ಕೂಡ ಬಂಗಾರದ ಬಣ್ಣದಿಂದ ಹೊಳೆಯುತ್ತಿದ್ದವು.

ಅವರು ನಡೆಯುತ್ತಿರುವ ದಾರಿ ಇಕ್ಕಟ್ಟಾಗಿತ್ತು. ಎರಡೂಬದಿಗೂ ಪರ್ವತ, ನಡುನಡುವೆ ಆಳೆತ್ತರದ ಬಂಡೆಗಳು. ಕತ್ತಲೆಯಲ್ಲಿ ಸಂದಿಗಳಲ್ಲಿಂದ ನುಕ್ಕಿ ಮುಂದೆ ಹೋಗಬೇಕಾಗಿತ್ತು. ಇಬ್ಬರಿಗೂ ಉಸಿರಾಡಿಸಲು ಕಷ್ಟವಾಗುತ್ತಿತ್ತು. ಅದರಲ್ಲಿ ಗೆಳೆಯನಿಗೆ ಹಕ್ಕಿಯ ಭಾರ ಹೊರಬೇಕಾಗಿತ್ತು.

ಕೊನೆಗೊಮ್ಮೆ ಗೆಳೆಯ ನಿಲ್ಲುವ ಸನ್ನೆ ಮಡಿದ. “ಇಲ್ಲಿ ನಿಲ್ಲುವ.” ಗೆಳೆಯ ಹೇಳಿದ. ಸಾವಿರಾರು ಅಡಿ ಕೆಳಗೆ ಭೂಮಿ ಕಾಣುತ್ತಿತ್ತು. ಅವರು ಪರ್ವತದ ತುತ್ತ ತುದಿಯನ್ನು ಮುಟ್ಟಿದ್ದರು.





ಗೆಳೆಯನು ಮೆಲ್ಲನೆ ಹಕ್ಕಿಯನ್ನು ಎತ್ತಿಕೊಂಡು ಮೂಡಲ ದಿಕ್ಕು ಕಾಣುವಂತೆ ಅಂಚಿನಲ್ಲಿ ಇಟ್ಟನು. ಆತನು ಕೆಳಗೆ ಕುಳಿತು ಮಾತನ್ನಾಡತೊಡಗಿದನು. ಒಕ್ಕಲಿಗ “ಅದು ಬರಿ ಕೋಳಿಮರಿಗಳ ಮಾತನ್ನು ಕೇಳುತ್ತದೆ.” ಎಂದು ಗೊಣಗಿದನು. ಆದರೆ ಗೆಳೆಯ ಆತನ ಮಾತನ್ನು ದುರ್ಲಕ್ಷಿಸಿ ಹದ್ದಿನ ಜೊತೆ ಮಾತಾಡತೊಡಗಿದ. ಆತ ಆ ಹಕ್ಕಿಗೆ ಸೂರ್ಯನ ಬಗ್ಗೆ ಹೇಳಿದ. ಸೂರ್ಯನ ಬಿಸಿಲು ಜಗತ್ತಿಗೇನೆ ಹೇಗೆ ಜೀವನ ಕೊಡುತ್ತದೆ ಎಂಬುದರ ಬಗ್ಗೆ ಹೇಳಿದ, ಆದು ದಿನಾಲು ಪ್ರಕಾಶವನ್ನು ಕೊಡುತ್ತ ಸ್ವರ್ಗವನ್ನೇ ಹೇಗೆ ಆಳುತ್ತದೆ ಎಂಬುದನ್ನು ಹೇಳಿದ.
"ಸೂರ್ಯನ ಕಡೆ ದಿಟ್ಟಿಸಿ ನೋಡು. ಅದು ಉದಯವಾಗುವಾಗ ನೀನು ಅದರ ಜೊತೆ ಉದಯವಾಗು. ನಿನ್ನದು ಆಕಾಶದ ಜೊತೆ ನಂಟುತನ, ಪೃಥ್ವಿಯ ಜೊತೆಗಲ್ಲ."
ಅದೇ ಸಮಯಕ್ಕೆ ಸರಿಯಾಗಿ ಸೂರ್ಯನ ಕಿರಣಗಳು ಪರ್ವತದ ಮೇಲಿಂದ ಹೊರಬಿದ್ದು ಇಡೀ ಜಗತ್ತನ್ನೇ ಬೆಳಗಿಸತೊಡಗಿದವು.



ಸೂರ್ಯ ತನ್ನ ಹೊಳಪನ್ನು ಬೀರುತ್ತ ಮೇಲೇರತೊಡಗಿದನು. ಈ ಮಹಾಪಕ್ಷಿ ತನ್ನ ರೆಕ್ಕೆಗಳನ್ನು ಹಿಂಬದಿಗೆ ಸರಿಸಿ ಅಗಲು ಮಾಡುತ್ತ ಜಗತ್ತಿಗೇನೆ ಜೀವನ ಕೊಡುವ ಸೂರ್ಯನನ್ನು ವಂದಿಸತೊಡಗಿತು. ಒಕ್ಕಲಿಗ ತುಟಿ ಪಿಟಕ್ಕೆನ್ನದೆ ನೋಡುತ್ತಲಿದ್ದ.

“ನೀನು ಪೃಥ್ವಿಯ ಮೇಲಿನ ಪಕ್ಷಿಯಲ್ಲ, ಮುಗಿಲಿನಲ್ಲಿ ಹಾರಾಡುವ ಪಕ್ಷಿ. ಹಾರಾಡು. ಹದ್ದು ಹಾರಾಡು.” ಎಂದು ಗೆಳೆಯ ಹುರಿದುಂಬಿಸತೊಡಗಿದ. ಗೆಳೆಯ ಒಕ್ಕಲಿಗನ ಹತ್ತಿರ ಬಂದು ಕುಳಿತ. ಎಲ್ಲ ಕಡೆಗೂ ನಿಃಶಬ್ದ ಶಾಂತತೆ. ಚಲನೆ ನಿಂತು ಹೋದಂತೆ. ಹದ್ದಿನ ಮರಿ ತಲೆ ಎತ್ತಿತು. ರೆಕ್ಕೆಗಳನ್ನು ಇನ್ನಷ್ಟು ಅಗಲು ಮಾಡಿ ಕಲ್ಲಿನ ಮೇಲೆ ಹರಡಿತು. ತನ್ನ ಕಾಲುಗಳಿಂದ ಕಲ್ಲನ್ನು ದಬ್ಬತೊಡಗಿತು.



ಒಮ್ಮಿಂದೊಮ್ಮೆಲೆ ಸ್ವಲ್ಪು ಕೂಡ ಚಲಿಸದೆ ರೆಕ್ಕೆಗಳನ್ನು ನೆಲಕ್ಕೆ ಅಪ್ಪಳಿಸಿದಂತೆ ಮಾಡಿ ಹಿಂದೆ ಮುಂದಕ್ಕೆ ಹಾರುತ್ತ ಆಕಾಶದಲ್ಲಿ ಮೇಲೆ ಮೇಲೆ ಹೋಗುತ್ತ ಅದು ಕಾಣದಾಯಿತು.

ಆ ಮೇಲೆ ಅದು ಎಂದಿಗೂ ಕೋಳಿಮರಿಗಳಲ್ಲಿ ಬಂದು ಇರಲಿಲ್ಲ.

ಲೇಖಕರ ಮಾತು

1920ರ ಸುಮಾರಿಗೆ ಆಫ್ರಿಕಾದ ಅಗ್ರೆಯವರು ದಕ್ಷಿಣ ಆಫ್ರಿಕಾ ಮತ್ತು ಅಮೇರಿಕಾದಲ್ಲಿ ಕಲಿಸಲು ಬಂದಾಗ ಅವರ ಆತ್ಮವೃತ್ತದಲ್ಲಿ ಈ ಜಾನಪದ ಕತೆಯನ್ನು ಕಂಡು ಹಿಡಿದೆನು. ಅಗ್ರೆ ಈ ಕತೆಯನ್ನು ಹೇಳಿ ಮುಗಿಸುವಾಗ ಆಫ್ರಿಕಾದಲ್ಲಿ ಇರುವ ನಮ್ಮನ್ನು ದೇವರು ತನ್ನ ಪ್ರತಿಬಿಂಬದ ಹಾಗೆ ನಿರ್ಮಿಸಿದ್ದನು. ಆದರೆ ಉಳಿದ ಜನರು ನಾವು ಕೋಳಿಮರಿಗಳು ಎಂದೆನ್ನುತ್ತ ನಮ್ಮ ತಲೆಯನ್ನು ತುಂಬಿದರು. " ನಾವು ಕೋಳಿಮರಿಗಳಲ್ಲ, ನಾವು ಹದ್ದುಗಳು. ಕೋಳಿಮರಿಗಳ ಹಾಗೆ ಮುಂದಿಟ್ಟ ಕಾಳುಗಳನ್ನು ನೋಡಿ ಸಂತೋಷ ಪಡಬೇಡಿ. ನಿಮ್ಮ ರೆಕ್ಕೆಗಳನ್ನು ಬಿಚ್ಚಿ ಹಾರಾಡಿರಿ." ಹೀಗೆ ಹೇಳಿದಾಗ ಮಕ್ಕಳೆಲ್ಲ ತಮ್ಮ ಕೈಗಳನ್ನು ಹದ್ದಿನ ರೆಕ್ಕೆಗಳಂತೆ ಪಸರಿಸಿ ಓಡಾಡುತ್ತಿದ್ದರು. 1991ರಲ್ಲಿ ನನ್ನ ಏಳು ವರುಷದ ಚಿಕ್ಕ ಮಗಳು, ರೋಜಾಲಿಂಡ ಮೃತ್ಯುಶಯ್ಯೆಯಲ್ಲಿ ಬಳಲುತ್ತಿದ್ದಾಗ ನಾನು ಅವಳಲ್ಲಿ ಧೈರ್ಯ ತುಂಬಲೆಂದು "ನಾವು ಆಗಸದಲ್ಲಿ ಹಾರಾಡುವ ಹದ್ದುಗಳು. " ಎಂದು ಹೇಳುತ್ತಿದ್ದೆ. ಟ್ರಾನ್ಸ್ಕ ಲದಲ್ಲಿಯ ಝೋಸಾ ಮಾತಾಡುವ ಪಂಗಡದಲ್ಲಿ ನಾನು ಪ್ರೀಸ್ಟ ಎಂದು ಕೇಲಸ ಮಾಡುತ್ತಿದ್ದಾಗ ಅವಳಿಗಾಗಿ ಈ ಕತೆ ಬರೆದೆ. ಈ ಕತೆಯನ್ನು ಅವಳಿಗೆ ಅರ್ಪಿಸಿದ್ದೇನೆ. ಅವಳ ಇಬ್ಬರು ಅಕ್ಕಂದಿರಿಗೆ ಮತ್ತು ನನ್ನ ಮೊಮ್ಮಕ್ಕಳಿಗೆ - ಜೋಸಿಯಾ ವಿಲಿಯಮ್, ಗ್ರೇಗರಿ ಕಾಲಿನ್ ಮತ್ತು ಹೆಲೆನಾ ಗ್ರೇಸ್ - ಈ ಪುಸ್ತಕವನ್ನು ಅರ್ಪಿಸಿದ್ದೇನೆ

ಚಿತ್ರಕಾರನ ಮಾತು

1982ರಲ್ಲಿ ನಾನು ಮೊಟ್ಟ ಮೊದಲಿಗೆ ಹಾರಾಡು ಹದ್ದು ಹಾರಾಡು ಈ ಮಕ್ಕಳ ಪುಸ್ತಕಕ್ಕಾಗಿ ಚಿತ್ರಗಳನ್ನು ಬರೆದಿದ್ದೆ. ಮಕ್ಕಳಿಗಾಗಿ ಬಣ್ಣದ ಚಿತ್ರಗಳಿರುವ ಪುಸ್ತಕ ಆಗಿನ ಕಾಲದಲ್ಲಿ ಅತಿ ವಿರಳವಾದ ಮಾತು. ಹೀಗಾಗಿ ಎರಡೇ ಬಣ್ಣಗಳಿರುವ ಚಿತ್ರಗಳನ್ನು ಆಗ ಉಪಯೋಗಿಸಿದೆ. ಆದರೆ ಇಂದು ನಮ್ಮ ದಕ್ಷಿಣ ಆಫ್ರಿಕಾ ಸ್ವತಂತ್ರವಾಗಿದೆ. ಆದ್ದರಿಂದ ಬಣ್ಣ-ಬಣ್ಣದ ಚಿತ್ರಗಳಿರುವ ಈ ಪುಸ್ತಕದ ಹೊಸ ಆವೃತ್ತಿಯನ್ನು ತೆಗೆಯಲಾಗಿದೆ. ಹಾರಾಡುವ ಹದ್ದಿನಂತಿರುವ ಈ ಮಕ್ಕಳಿಗೆ ನಾನು ಈ ಪುಸ್ತಕವನ್ನು ಅರ್ಪಿಸುತ್ತೇನೆ.

ಸಮಾಪ್ತ